ರೋಗ ಬಿದ್ದಾಗ, ಊರ ಮೇಲೆ ಸೈನ್ಯ ಹಾಯುವಾಗ ಜನ ಬೆದರಿ ಊರು ಬಿಟ್ಟರೆ ನಾವು ದಿನಕ್ಕೊಮ್ಮೆ ವಾರಕ್ಕೊಮ್ಮೆ ನಮ್ಮ ಬಿಡಾರ ಕೀಳಬೇಕಾಗುತ್ತಿತ್ತು. ಕದ್ದವರು ಇದ್ದೆಡೆಯೇ ಇದ್ದರೆ ಊರವರು ಹಿಡಿಸಿ ಕಯ್ಯೋ ಕಾಲೋ ಕತ್ತರಿಸಿ ಹಾಕುತ್ತಿದ್ದರು. ನಾವೇನೂ ಊರೂರುಗಳ ನಡುಹಾದಿಯಲ್ಲಿ ಮರ ಏರಿ ಕೂತು ದಾರಿ ಹೋಕರ, ಗಾಡಿ ಪ್ರಯಾಣದವರನ್ನು ಬಡಿಯುವ, ದವಸದ ಮೂಟೆ, ಇದ್ದಬದ್ದ ಕಾಸು ಕೀಳುವ ದೊಡ್ಡ ದರೋಡೆಕೋರರಂತಲ್ಲದೆ ಸಂತೆ, ಜಾತ್ರೆಯ ಪುಡಿಗಳ್ಳರಾಗಿದ್ದೆವು.

ತನ್ನದೇ ಕಾಸಿನ ಗಂಟು ಹೋಯಿತೆಂದು ಹುಯಿಲೆಬ್ಬಿಸಿ ಬೇರೆಯವರ ಕಿಸೆಯ ಚಿಲ್ಲರೆ ಕಾಸು ಹೊಡೆಯುವುದರಲ್ಲಿ ನನ್ನ ತಾತ ಬಲು ನಿಸ್ಸೀಮನಾಗಿದ್ದ! ಹಾಗಾಗಿ, ರಾಜ್ಯದ ಹೆದ್ದಾರಿ ದರೋಡೆಕೋರರ ಗುಂಪಿಗೆ ತಾತನನ್ನು ಕಂಡರೆ ಬಲು ಗೌರವವಿದ್ದಿತಂತೆ. ಆ ದರೋಡೆಕೋರರ ಗುಂಪು ಬೇರೆ ಅಂದೆನಲ್ಲ. ನಮ್ಮ ಹಿಡಿಕಂಪಣ ಬೇರೆ. ಆ ದರೋಡೆಕೋರರ ಗುಂಪಿಗೆ ಅಲ್ಲಲ್ಲಿ ಊರ ಯಜಮಾನರ, ಪಾಳೆಯಗಾರರ, ರಾಜಮಹಾರಾಜರ ಸಖ್ಯವಿರುತ್ತಿತ್ತಂತೆ. ತಮ್ಮ ವಿರೋಧಿಗಳ ಊರು ಕೇರಿ ಅಥವಾ ಹೊರ ರಾಜ್ಯದ ಮೇಲಿನ ಗುಂಪನ್ನು ಬಡಿಯಲು ದರೋಡೆಕೋರರ ಯಜಮಾನನೊಂದಿಗೆ ವೀಳ್ಯಕೊಟ್ಟು ಒಳ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಅಂಥಾ ದಾರಿ ದರೋಡೆಕೋರ ಯಜಮಾನನೊಬ್ಬ ನಮ್ಮ ತಾತನನ್ನು ಕರೆದು ನೀನು ಹೊಲಗದ್ದೆ, ಜಾತ್ರೆ ಗಿತ್ರೆಯ ಮೂರು ಕಾಸಿನ ಗಂಟು, ರಾಗಿ, ಜ್ವಾಳದ ಕಳ್ಳತನ ಬಿಡು. ಬಹು ಬುದ್ಧಿಶಾಲಿಯಾದ ನೀನು ನಮ್ಮ ಗುಂಪಿನಲ್ಲಿ ಬಂದು ಭಾರಿ ವ್ಯವಹಾರದಲ್ಲಿ ಕೈ ಮಾಡುವುದು ಒಳ್ಳೆಯದು. ಎಂಥ ಅಪಾಯದಲ್ಲಿ ಸಿಕ್ಕಿದರೂ ದೊಡ್ಡವರ ಸಹಾಯ ಹಸ್ತ, ಆಶೀರ್ವಾದ ಇದ್ದು ಶೂಲದಿಂದ ತಪ್ಪಿಸಿಕೊಳ್ಳಬಹುದು. ಈಗ ನೀನು ಎಲ್ಲಿ ಸಿಕ್ಕಿ ಹಾಕಿಕೊಂಡರೂ ಊರ ಜನವೇ ಕೈ ಕಾಲು ಮುರಿಯುವುದು ಗ್ಯಾರಂಟಿ, ಯೋಚನೆ ಮಾಡು ಎಂದನಂತೆ. ನನ್ನ ತಾತ ಇಕ್ಕಟ್ಟಿಗೆ ಸಿಕ್ಕಿಕೊಂಡರೂ ಮರ್ಯಾದೆಯಿಂದ, 'ಸ್ವಾಮಿ ಪೂರ್ವ ಕಾಲದಿಂದ ನಾವು ಹೆದ್ದಾರಿ ದರೋಡೆ ಮಾಡಿದವರಲ್ಲ. ನಮ್ಮದೇನಿದ್ದರೂ ಹೊಟ್ಟೆಪಾಡಿನ ಕಸುಬು. ಕುಲ ಕಸುಬಿನ ಧರ್ಮ ಬಿಟ್ಟು ದೊಡ್ಡವರು ಕಾಣಿಸಿದ ಬಲು ಸಂಪಾದನೆಯ ದಾರಿ ಹಿಡಿದರೆ ನಮ್ಮ ಕುಲದೇವತೆ ಕನ್ನ ಮಾರಿ ತಂದೆ ಒಪ್ಪಬೇಕಲ್ಲ? ಅದರ ಮೇಲೆ ಆ ದೇವತೆಯನ್ನು ಕರೆದು ಅಪ್ಪಣೆ ಕೇಳಬೇಕು, ದೇವರು ಇದಕ್ಕೆಲ್ಲ ಬಲಗೈ ಪ್ರಸಾದ ನೀಡುವುದು ಕಷ್ಟ' ಅಂದುಬಿಟ್ಟ.

ಒಂದು ಜಾತ್ರೆಯಲ್ಲಿ ತಾತ ಊರ ಯಜಮಾನನ ಕೈಗೆ ಸಿಕ್ಕಿಕೊಂಡ. ಆಗ ಊರ ಗೌಡ ನಿನ್ನ ಗುಂಪು ಎಷ್ಟು ದೊಡ್ಡದಿದೆ ಹೇಳು ಎಂದ. ಒಬ್ಬ ಕೈಯಿಲ್ಲದವನಂತೆ, ಇನ್ನೊಬ್ಬ ಕಾಲಿಲ್ಲದವನಂತೆ, ಮತ್ತೊಬ್ಬ ಕಣ್ಣಿಲ್ಲದವನಂತೆ ನಟಿಸುತ್ತ ಜಾತ್ರೆಯಲ್ಲಿ ಕಾಸಿನ ಭಿಕ್ಷೆ ಎತ್ತುತ್ತಿದ್ದ ತನ್ನ ಕುಲದವರನ್ನೆಲ್ಲ ಕರೆಸಿ ನಿಲ್ಲಿಸಿದನಂತೆ. ಗೌಡನು ದೇವರ ಜಾತ್ರೆ ನಡೆಯುವಾಗ ಈ ಕಳ್ಳರನ್ನು ಬಡಿಯುವುದು ಬೇಡವೆಂದು, ನಮ್ಮ ಪರಿವಾರವನ್ನೆಲ್ಲ ಎಳೆಸಿ ದನದ ಕೊಟ್ಟಿಗೆಗೆ ಕೂಡಿ ಹಾಕಿಸಿದ. ತಾತ ಯಜಮಾನನ ಕಾಲು ಹಿಡಿದುಕೊಂಡು, 'ಸ್ವಾಮಿ ಇನ್ನು ಕಳ್ಳತನ ಮಾಡುವುದಿಲ್ಲ. ನೀವು ಕಾಲಲ್ಲಿ ತೋರಿದ ಕೆಲಸ ಮಾಡಿಕೊಂಡಿರುತ್ತೀವಿ, ನಿಮಗಾದರೂ ಸರಿ, ದೇವರಿಗಾದರೂ ಸರಿ ತಪ್ಪು ಕಾಣಿಕೆ ಮಡಗುತ್ತೀವಿ' ಎಂದನಂತೆ.

ಯಜಮಾನನು ಆಳುಗಳನ್ನು ಕರೆಸಿ ತಾತನ ಸುತ್ತ ನಿಂತವರೆಲ್ಲರ ಅಂಗಿ, ಚಲ್ಲಣ ಬಿಚ್ಚಿಸಿ ಒದರಿಸಿದರೆ ಒಂದು ದಮಡಿ ಕಾಸೂ ಉದುರಲಿಲ್ಲವಂತೆ! 'ಥೂ ದೈನೇಸಿ ಸೂಳೆಮಕ್ಳ ಮೈ ಮೇಗಲ ವಸ್ತ್ರವೆಲ್ಲ ಬಿಚ್ಚಿ ಒದರ್‍ಯಾಡಿದರೂ ಒಂದು ತಗಡು ಕಾಸೂ ಬೀಳ್ಲಿಲ್ವಲ್ಲ ಇನ್ನು ತಪ್ಪು ಕಾಣಿಕೆ ಎಲ್ಲಿಯದು' ಅನ್ನುವಲ್ಲಿ, ಇತ್ತ ಬಟ್ಟೆ ಬಿಚ್ಚಿದ ಆಳುಗಳು ಅದರ ವಾಸನೆ ತಡೆಯಲಾರದೆ ಅವನ್ನು ತಿಪ್ಪೆಗೆ ಎಸೆದರಂತೆ! ಗೌಡನು ಜಾತ್ರೆ ಮುಗಿಯುವವರೆಗೆ ತಾತನ ಕುಟುಂಬವನ್ನು ಕೊಟ್ಟಿಗೆಯಲ್ಲೇ ಕೂಳೆ ಹಾಕಿಸಿ, ಅದಾದ ಮೇಲೆ ಎಲ್ಲಿಯೂ ತಪ್ಪಿಸಿಕೊಂಡು ಹೋಗದಂತೆ ಕಾಲಿಗೆ ಹಗ್ಗ ಕಟ್ಟಿಸಿ, ಊರ ಗುಡಿಯ ಸುತ್ತಿನ ಬಿದ್ದು ಹೋಗಿದ್ದ ಗೋಪುರ, ಕಾಂಪೌಂಡು ಕಟ್ಟಿಸಿದನಂತೆ. ಹಾಗೆ ಕಾಲು ಕಟ್ಟಿದ್ದರೂ ರಾತ್ರಿ ಹೊತ್ತು ಕುಲ ಬಾಂಧವರೆಲ್ಲ ಒಬ್ಬೊಬ್ಬರಾಗಿ ತಪ್ಪಿಸಿಕೊಂಡು ಹೋಗಿಬಿಟ್ಟರು. ತಾತ ದೇವರಿಗೆ ಹೆದರಿಕೊಂಡು ಊರೊಳಗೇ